



ಎಡದಿಂದ ಬಲಕ್ಕೆ :
1. ಅವರವರ ನಡುವೆ ವಿತ್ತದ ವಿಚಾರದಲ್ಲಿ ಭಾರೀ ಗೊಂದಲ, ಗದ್ದಲ (4)
3. ಬರ ನೀಗುವುದು ಹೇಗೆ ? ಆಕಾಶವಂತೂ ಮೋಡ ರಹಿತ (3)
4. ಸಮೀಕ್ಷೆಗೆ ಅಡ್ಡ ಬಂದವರನ್ನು ಮನ್ನಿಸಿಬಿಡು (3)
6. ವಿಕಟ ಕವಿಯ ಕೆಲಸ ಕಂಡು ತಬ್ಬಿಬ್ಬು (4)
7. ಕಪಾಲಕ್ಕೆ ಬಾರಿಸಹೋದವ ಅವನನ್ನು ಕಾಪಾಡುವವ ಕೂಡ (3)
9. ಆರೋಹಣದ ತಂತ್ರಗಳನ್ನು ಹೇಳು, ತಿಳಿಸು (3)
11. ಮಣ್ಣಿನಲ್ಲಿ ರಚನೆಗೊಂಡಿರುವ ಸುಂದರಿ (3)
13. ಮಾಲೆ ಕತ್ತರಿಸಿ ಪುಲಿಯಂತೆ ಕೂಗಿದ್ದು ಸೊಕ್ಕು ತಾನೇ ? (3)
15. ಆತಂಕವನ್ನು ತಂದಿಟ್ಟ ದೂತ ಅಲ್ಲೇ ಕಣ್ಮರೆ (4)
17. ಅವರಿಂದ ಸಂಭಾವನೆಯನ್ನು ಪಡೆದದ್ದೇ ಅದೃಷ್ಟ (3)
18. ಗೌರವವನ್ನು ತೋರಿದೊಡನೆ ಹಿಂದಿರುಗಿತು ದುರಹಂಕಾರ (3)
19. ಮೇಜಿನ ಮುಂದೆ ಬಂದಾಗಲೆಲ್ಲ ನೆನಪಾಗುತ್ತದೆ ತಾಯ್ನಾಡು (4)

ಮೇಲಿಂದ ಕೆಳಕ್ಕೆ :
1. ಆಫ್ರಿಕವನ್ನು ಹೋಲುವ ಹೆಸರಿನ ಹೊಳಪಿನ ಖನಿಜ (3)
2. ಕರ್ಕಶ ಶಬ್ದಗಳಿಂದ ಎಲ್ಲರನ್ನೂ ಕಾಪಾಡಿದವ ಈತ (3)
3. ಈ ನೀರಲ್ಲಿ ಕಿಂಚಿತ್ತೂ ಕಲ್ಮಶ ಇಲ್ಲ (3)
5. ಮೊಸರಿನಂತೆಯೇ, ಸ್ವಲ್ಪ ಹೆಚ್ಚು ಕಡಿಮೆ ಅಷ್ಟೆ (3)
7. ಮಂಪರು ಪರೀಕ್ಷೆ ಏನೆಂದೇ ತಿಳಿದಿಲ್ಲ, ಆತ ಪಂಡಿತನೇನಲ್ಲ ಬಿಡಿ (3)
8. ಋಣ ಭಾರ ಕಡಿಮೆ ಮಾಡಿ ಕೊಟ್ಟ ದಯಾಳು (3)
9. ಅದೇ ಅಕಾರ್ಯವನ್ನೇ ಮತ್ತೆ ಮತ್ತೆ ಮಾಡಿದ ನೀಚ ಮನುಷ್ಯ (3)
10. ಹೊಸ ರೂಪ ನೀಡುವ ಕಾರ್ಯವೆಂದರೆ ಭಾರೀ ಉತ್ಸಾಹ (3)
12. ನೆಮ್ಮದಿ ನೀಡದವನನ್ನು ಹೀಗೆ ಸಾಯಿಸುವುದೇ ? (3)
14. ಕೂಲಿಗೆಲಸದ ಆಯ ವ್ಯಯ ಬರೆಯಲು ಒಬ್ಬ ಗುಮಾಸ್ತ (3)
15. ಆಜು ಬಾಜು ಎಲ್ಲರ ಕೈಗಳಲ್ಲೂ ತಾವರೆ ನೋಡಿ (3)
16. ಮೇವಿನ ರಾಶಿ ಕೊಂಡು ತಂದದ್ದು ಪಕ್ಷದ ಒಂಬತ್ತನೆಯ ದಿನ (3)

### 14-09-2017ರ ಉತ್ತರಗಳು

ಎಡದಿಂದ ಬಲಕ್ಕೆ :
1. ಅಭ್ಯುದಯ 3. ಪ್ರತಾಪ 4. ಜನನಿ 6. ಅರವಿಂದ 7. ನಿಯಾಮಕ 9. ಧನದಾಹ 12. ಬುದ್ಧಿವಂತ 14. ನವಾದಿ (ದಿವಾನ ಹಿಂದುಮುಂದು) 15. ವಾರಸು 16. ನಗೆಗಾರ

ಮೇಲಿಂದ ಕೆಳಕ್ಕೆ :
1. ಅಪವಾದ 2. ಯಜಮಾನಿ 3. ಪ್ರಚಾರ 5. ನಿಯಮ 6. ಅಷ್ಟವಿಧ 8. ಕಲುಷಿತ 10. ನಯನ 11. ಹರಿದಿನ 12.ಬುಧವಾರ 13. ವಂದಿಸು

# ಅರ್ಧನಾರೀಶ್ವರ: ನಿಜವೇ?

ಅರ್ಧನಾರೀಶ್ವರ ಮೂಲತಃ ಅದೊಂದು ಪೌರಾಣಿಕ ಕಲ್ಪನೆ. "ಮಾನವ ಶರೀರ ಮೇಲಿಂದ ಕೆಳಕ್ಕೆ ನೇರವಾಗಿ ಇಬ್ಭಾಗವಾಗುವಂತೆ ಸೀಳಿ ಜೋಡಿಸಿದ ಒಂದು ಭಾಗ ಗಂಡಿನದು, ಮತ್ತೊಂದು ಅರ್ಧ ಹೆಣ್ಣಿನದು", ಹೀಗೆ ಅದರ ರಚನೆ ! ಈಶ್ವರ ಮತ್ತು ಪಾರ್ವತಿಯರ ಈ ಬಗೆಯ ಅರ್ಧರ್ಧ ಜೋಡಣೆಯೇ 'ಅರ್ಧನಾರೀಶ್ವರ'. ಇಡೀ ಜಗದಲ್ಲಿ ಒಂದೇ ಒಂದು ದೇವಾಲಯದಲ್ಲಿ ಈ ಕಲ್ಪನೆ ಮೂರ್ತಿ ರೂಪವನ್ನು ಪಡೆದಿದೆ. ತಮಿಳು ನಾಡಿನ, ನಾಮಕ್ಕಲ್ ಜಿಲ್ಲೆಯ, ತಿರುಚೆಂಗೊಡೆ ಎಂಬ ಊರಿನಲ್ಲಿ ಒಂದು ಅರ್ಧನಾರೀಶ್ವರ ದೇವಸ್ಥಾನ ಇದೆ. ಅಷ್ಟೇ ಹೊರತು, ವಾಸ್ತವದಲ್ಲಿ ಅರ್ಧ ಗಂಡುಅರ್ಧ ಹೆಣ್ಣು ಶರೀರದ ಮನುಷ್ಯ ಜೀವಿ ಈ ವರೆಗೂ ಒಂದೂ ಸೃಷ್ಟಿಗೊಂಡಿಲ್ಲ. ಆದರೆ, ವಿಸ್ಮಯ ಏನೆಂದರೆ, ಮಾನವೇತರ ಪ್ರಾಣಿ ಲೋಕದಲ್ಲಿ ಇಂಥ ಅತ್ಯಂತ ವಿಚಿತ್ರದ, ಪರಮ ಸೋಜಿಗದ ಸೃಷ್ಟಿಗಳು ಪತ್ತೆಯಾಗಿವೆ. ವಿಶೇಷವಾಗಿ ಕೀಟಗಳಲ್ಲಿ, ಚಿಪ್ಪಿನ ಪ್ರಾಣಿಗಳಲ್ಲಿ ಮತ್ತು ಹಕ್ಕಿಗಳಲ್ಲಿ ಇಂತಹ ಜೀವಂತ ನಿದರ್ಶನಗಳು ಕಾಣಸಿಕ್ಕಿವೆ !




ಉದಾಹರಣೆಗೆ ಚಿತ್ರ1, 2 ಮತ್ತು 3 ರಲ್ಲಿರುವ ಚಿಟ್ಟೆಗಳನ್ನು ನೋಡಿ. ಪಾತರಗಿತ್ತಿಗಳ 'ಪ್ಯಾಪಿಲ್ಲಿಯೋನಿಡೇ' ಕುಟುಂಬದ ಈ ಸ್ವಾಲೋಟೇಲ್ ಗಳ ಸಾಮಾನ್ಯ, ಮಾಮೂಲು ಗಂಡುಹೆಣ್ಣು ಚಿಟ್ಟೆಗಳು ಚಿತ್ರ2 ಮತ್ತು 3 ರಲ್ಲಿವೆ. ಚಿತ್ರ1 ರಲ್ಲಿರುವ ಅದೇ ಕುಟುಂಬದ, ಅಂಥದೇ ಸ್ವಾಲೋಟೇಲ್ ಚಿಟ್ಟೆಯ ಎಡಬಲ ಪಾರ್ಶ್ವ ಗಳನ್ನು ಗಮನಿಸಿ : ಅದರ ಎಡ ಅರ್ಧ 'ಗಂಡು', ಬಲ ಅರ್ಧ 'ಹೆಣ್ಣು' ; ಪ್ರತಿ ಭಾಗದಲ್ಲೂ ಅದರದೇ ಲಿಂಗದ ವರ್ಣ ವಿನ್ಯಾಸ ಮತ್ತು ಜನನಾಂಗಗಳು ಕೂಡ ! ವರ್ಣ ತಂತುಗಳ ಅಸಹಜ , ದೋಷಯುಕ್ತ ಸಂಯೋಜನೆಯಿಂದ ಅಪರೂಪವಾಗಿ ಕೆಲವು ಪಾತರಗಿತ್ತಿಗಳು ( ಸರಾಸರಿ ಪ್ರತಿ 30,000 ಚಿಟ್ಟೆಗಳಲ್ಲಿ ಒಂದೆರಡು ಮಾತ್ರ ) ಹೀಗೆ ಅರ್ಧನಾರೀಶ್ವರರಾಗಿ ಜನಿಸುತ್ತವೆ !

ನಿಮಗೇ ತಿಳಿದಂತೆ, ಮನುಷ್ಯರೂ ಸೇರಿದಂತೆ ಎಲ್ಲ ಬಗೆಯ ಪ್ರಾಣಿಗಳಲ್ಲೂ ಗಂಡು ಮತ್ತು ಹೆಣ್ಣುಗಳ ದೇಹ ಗಾತ್ರ, ಇತರ ಬಾಹ್ಯ ಲಕ್ಷಣಗಳು ಹಾಗೂ ಜನನಾಂಗಗಳೂ ಕೂಡ ಬೇರೆ ಬೇರೆ ರೀತಿಯಲ್ಲಿರುತ್ತವೆ ( ಡೈಮಾರ್ಫಿಸಂ). ಕೆಲವು ಪ್ರಾಣಿಗಳ ಗಂಡು ಹೆಣ್ಣುಗಳು ಬಾಹ್ಯ ಲಕ್ಷಣಗಳಲ್ಲಿ ಬೇರೆ ಬೇರೆ ರೀತಿಯಲ್ಲಿದ್ದರೂ ಅವು ಎರಡೂ ಬಗೆಯ ಜನನಾಂಗಗಳನ್ನು ಪಡೆದಿರುತ್ತವೆ ( ಹರ್ಮಾಫ್ರೋಡೈಟ್ಸ್ ). ಅಪರೂಪದ ಸಂದರ್ಭಗಳಲ್ಲಿ ಕೆಲ ಪ್ರಾಣಿಗಳು ಬಾಹ್ಯ ರೂಪದಲ್ಲಿ ಗಂಡು ಆಗಿದ್ದು ಹೆಣ್ಣಿನ ಜನನಾಂಗವನ್ನು, ಅಥವಾ ಬಾಹ್ಯವಾಗಿ ಹೆಣ್ಣು ಆಗಿದ್ದು ಗಂಡಿನ ಜನನಾಂಗವನ್ನು ಪಡೆದು ಹುಟ್ಟುತ್ತವೆ ( ಗೈನಾಂಡ್ರೋಮಾರ್ಫ್). ಕೆಲವೇ ಕೆಲವು ಪ್ರಾಣಿಗಳು ಅತ್ಯಂತ, ಅತ್ಯಂತ ಅಪರೂಪವಾಗಿ ಅರ್ಧ ಭಾಗ ಗಂಡಿನ ಮತ್ತು ಅರ್ಧ ಭಾಗ ಹೆಣ್ಣಿನ ಶರೀರವನ್ನು ಪಡೆದು ( ಲ್ಯಾಟರಲ್ ಗೈನಾಂಡ್ರೋಮಾರ್ಫ್ ) ಜನ್ಮ ತಳೆಯುತ್ತವೆ ; ವಾಸ್ತವದ ಜೀವಂತ ಅರ್ಧನಾರೀಶ್ವರರಾಗುತ್ತವೆ!

■ ಎನ್. ವಾಸುದೇವ್